ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 3, Nov-Dec, 2022, Pp. 106-113.
©*IIMRD*, Mysuru.

IIMRD JOURNALS

www.iimrd.com

# ಡೊಳ್ಳಿನ ಹಾಡುಗಳಲ್ಲಿ ಬಸವಣ್ಣ

**ಗೌತಮ ಸ. ಮಾಳಗೆ* ಡಾ. ಪಿ. ನಾಗರಾಜ****

*ಸಂಶೋಧಕರು, ಕನ್ನಡ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

***ಸಾರಾಂಶ: (Abstract)***

*ಜನಪದರ ವಾದ್ಯಗಳಲ್ಲಿ ಡೊಳ್ಳು ಪುರಾತನ ವಾದ್ಯವಾಗಿದೆ. ಈ ಡೊಳ್ಳನ್ನು ಕುರುಬ ಸಮುದಾಯ ತನ್ನ ಸಂಸ್ಕೃತಿಯ ಹಿರಿಮೆಯಾಗಿ ತಲೆತಲಾಂತರದಿಂದ ನುಡಿಸುತ್ತಾ ಬರುತ್ತಿದ್ದೆ. ಈ ಡೊಳ್ಳಿನ ವಾದ್ಯದಲ್ಲಿ ಬಸವಣ್ಣನವರನ್ನು ಹೇಗೆ ಬಣ್ಣಿಸಲಾಗಿದೆ, ಕುರುಬ ಸಮೂದಾಯದ ಶಿವಶರಣರಾದ ಕುರುಬರ ಬೀರಣ್ಣ ಹಾಲುಮತದ ಆರಾಧ್ಯ ದೈವ ಶಾಂತಮುತ್ತಯ್ಯ ಬಸವಣ್ಣನವರಿಗೆ ಇರುವ ಸಂಬಂಧದ ಬಗ್ಗೆ ಡೊಳ್ಳಿನ ಹಾಡಿನಲ್ಲಿ ಹಾಡುಗಾರರು ಚಿತ್ರಿಸಿದ ಬಸವಣ್ಣನವರ ವಿವಿಧ ಆಯಾಮದ ವ್ಯಕ್ತಿತ್ವವನ್ನು ಹಾಡುಗಾರರು ಹೇಗೆ ಚಿತ್ರಿಸಿದ್ದಾರೆ ಎಂಬುವುದನ್ನು ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.*

***ಮುಖ್ಯಪದಗಳು: (Keywords)*** *ಡೊಳ್ಳು, ಬಸವಣ್ಣ, ದಾಸೋಹ, ಜಂಗಮ, ಪವಾಡ,* ಕಾಯಕ.

## ಪೀಠಿಕೆ

12ನೇ ಶತಮಾನದಲ್ಲಿ ಕಾಯಕ ಜೀವಿಗಳ ದೊಡ್ಡ ಪರಂಪರೆಯನ್ನು ಕಾಣಬಹುದು. ಶರಣ ಒಕ್ಕಲಿಗ ಮುದ್ದಣ, ಅಜಗಣ್ಣ, ಏಲೇಶ್ವರ ಕೇತಯ್ಯ ಇಳಿಹಾಳ ಬೊಮ್ಮಯ್ಯ ಮುಂತಾದವರು ಕೃಷಿಕರಾಗಿದ್ದರು. ಗಾಣದ ಕಣ್ಣಪ್ಪ, ಮೀನುಗಾರನಾಗಿದ್ದ, ಚೌಡಯ್ಯ ದೋಣಿ ನಡೆಸುವವನಾಗಿದ್ದ, ಅಮುಗಿದೇವಯ್ಯ ಪತ್ನಿ ವರದಾನಿ, ರೆಮ್ಮವ್ವೆ ನೇಕಾರರಾಗಿದ್ದರು, ಕುಂಬಾರ ಗುಂಡಯ್ಯ ಮಡಕೆ ಮಾಡುವವನಾಗಿದ್ದ, ಮೇದಾರಿಕೆ ಮಾಡುವವ ಮೇದಾರ ಕೇತಯ್ಯ, ಅಕ್ಕಸಾಲಿಗನಾಗಿದ್ದ ಕಿನ್ನರಿ ಬ್ರಹ್ಮಯ್ಯ (ಕಲ್ಯಾಣಕ್ಕೆ ಬಂದ ಮೇಲೇ ಕಿನ್ನರಿ ನುಡಿಸುತ್ತಿದ್ದ.) ಬಾಚಿಕಾಯಕದ ಬಸವಣ್ಣ ಬಡಗಿಕಾಯಕ ಮಾಡುತ್ತಿದ್ದ. ಚಿಕ್ಕದೇವ್ವಯ ಕಂಚುಗಾರನಾಗಿದ್ದ. ಸೂಜಿಕಾಯಕದ ಮಾರಿ ತಂದೆ, ಶಿವದಾಸಿಮಯ್ಯ ಸಿಂಪಿಗೆ ಕಾಯಕ ಮಾಡುತ್ತಿದ್ದರು. ಮಡಿವಾಳ ಮಾಚಯ್ಯ ಹಡಪ್ಪದ ಅಪ್ಪಣ್ಣ ಕನ್ನಡಿ ಕಾಯಕದ ಅಮ್ಮಿದೇವಯ್ಯ, ತುರುಗಾಹಿ ರಾಮಣ್ಣ ದನ ಕಾಯುತ್ತಿದ್ದ.[1] ಇನ್ನೂ ಅಸಂಖ್ಯಾತ ಕಾಯಕ ಜೀವಿಗಳು ನಾಯಕ ಬಸವಣ್ಣನಿಗೆ ಜೊತೆಯಾಗಿದ್ದರು. ಅವರಲ್ಲಿನ ಒಂದು ಕಾಯಕ ವರ್ಗ ಕುರಿ ಸಾಕಾಣಿಕೆಯ ಕರುಬರು. ಕುರುಬ ಜನಾಂಗಕ್ಕೂ ಬಸವಣ್ಣನಿಗೂ ಬೆಸೆದುಕೊಡಿರುವ ಹಲವಾರು ಕಥೆಗಳು ನಮ್ಮ ಜನಪದ ಕಾವ್ಯಗಳಲ್ಲಿ ದಕ್ಕುತ್ತವೆ.[2] ಡಾ.ಪಿ.ಕೆ. ರಾಜಶೇಖರವರು ಸಂಪಾದಿತ ಕುರುಬರ ಬೀರಪ್ಪನ ಕಥೆಯಲ್ಲಿ ಕುರಿಕಾಯುವ ಬೀರಪ್ಪ ಬಸವಣ್ಣ ಮತ್ತು ಅವನ ಮಠವನ್ನು ನೋಡಬೇಕೆಂಬ

*Please cite this article as: ಗೌತಮ ಸ. ಮಾಳಗೆ ಮತ್ತು ಪಿ. ನಾಗರಾಜ* (2022). ಡೊಳ್ಳಿನ ಹಾಡುಗಳಲ್ಲಿ ಬಸವಣ್ಣ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 106–113.*

ಬಯಕೆಯನ್ನು ಹಾದಿಯಲ್ಲಿ ಹಾದು ಹೊಗುತ್ತಿರುವ ಶರಣರ ಬಳಿಗೆ ವ್ಯಕ್ತಪಡಿಸುತ್ತಾನೆ. ಬಸವಣ್ಣನವರ ಮಠಕ್ಕೆ ಲಿಂಗವಿಲ್ಲದೇ ಪ್ರವೇಶವಿಲ್ಲ ಅದಕ್ಕೆ ಕುರುಬರ ಬೀರಪ್ಪನ ಕೊರಳಿಗೆ ಕುರಿಪಿಕ್ಕೆಯನ್ನು ಕುತ್ತಿಗೆಗೆ ಕಟ್ಟಿಕೊಂಡು ಬಸವಣ್ಣನವರನ್ನು ತಲಪುತ್ತಾನೆ. ಆಗಾ ನಿಲಮ್ಮರಿಗೆ ಬೀರಪ್ಪನ ಕೊರಳ ಲಿಂಗ ಕುರಿಪಿಕ್ಕೆಯಾಗಿ ಕಂಡರೆ, ಬಸವಣ್ಣವರಿಗೆ ಅದರಲ್ಲಿ  ಕೈಲಾಸ, ಶಿವ, ಪಾರ್ವತಿ ಗಣಪತಿ, ಷಣ್ಮುಖ, ಗಣಗಳೆಲ್ಲರೂ ಕಂಡು ಕುರಿಪಿಕ್ಕೆಯನ್ನು ಲಿಂಗಮಾಡಿ ಬೀರಪ್ಪನಿಗೆ ಶರಣು ಮಾಡುವ ಜನಪದರ ಬಸವಣ್ಣನವರಲ್ಲಿ ಕೃಷಿಯ ಬಗ್ಗೆ ಹೊಂದಿದ್ದ ಉತ್ಕೃಷ್ಟ ಭಾವನೆಗಳಿಗೆ ಸಾಕ್ಷಿಯಾಗಿದೆ.

ಕುರಿಪಿಕ್ಕೆಯಲ್ಲಿ ಕೈಲಾಸದ ಸಕಲವನ್ನು ಕಂಡಂತೆ ಚಿತ್ರಿಸಿರುವುದು, ಮತ್ತೊಮ್ಮೆ ಕಾಯಕವೇ ಕೈಲಾಸ ತತ್ವವನ್ನು ಪ್ರತಿಪಾದಿಸಿದಂತೆ ಎಂದು ಡಾ.ಪಿ.ಕೆ.ರಾಜಶೇಖರ ಹೇಳುತ್ತಾರೆ. ಅದೇ ರೀತಿ ಜಿ.ಕ. ಪರಮಶುರಾಮಯ್ಯರ ತಗರ ಪವಾಡದಲ್ಲಿ ಬಸವಣ್ಣ ಮತ್ತು ಕುರುಬ ಸಮುದಾಯಕ್ಕೂ ಬೇಸೆದ ಬೆಸುಗೆಯನ್ನು ಹೀಗೆ ತಿಳಿಸಿದ್ದಾರೆ. ಕುರುಬ ಜನಾಂಗಕ್ಕೆ ಗುರುವಾಗಿ ಪ್ರತಿಷ್ಠಿತನಾದ ಶಾಂತಮುತ್ತಯ್ಯನು ಸತ್ತ ತಗರನ್ನು ಕಲ್ಯಾಣದ ಶರಣರನ್ನು ಹಾಗೂ ಅರಸು ಬಿಜ್ಜಳನ ಸಮಕ್ಷಮದಲ್ಲಿ ಬದುಕಿಸಿ ಮೆರೆದ ಪವಾಡ ಈ ಕಾವ್ಯದ ಕೇಂದ್ರ ವಸ್ತುವಾದರೂ ಹಿನ್ನೆಲೆಯಾಗಿ ಕುರಿಗಳು ಪ್ರಥಮತ: ಹುಟ್ಟಿದುದ್ದು, ಆದಿಗೊಂಡನ ಹೊಲದಲ್ಲಿ ಹುತ್ತಿನಲ್ಲಿ ಅವನು ಪರಮೇಶ್ವರನನ್ನು ಬೈತಿಟ್ಟುದು, ಪದ್ಮಗೊಂಡನು ಅವುಗಳನ್ನು ಹೊರ ತೆಗೆದು ಕಾಯುತ್ತ ನಡೆದುದು, ಬೀರಯ್ಯ ಹುಟ್ಟಿ, ಪದ್ಮಗೊಂಡನ ಜೊತೆ ಕುರಿ ಕಾಯ್ದುದು, ಪದ್ಮಗೊಂಡನ ಇಬ್ಬರು ಹೆಂಡಂದಿರಲ್ಲಿ ಜನಿಸಿದ ಎರಡು ಸಂತಾನದವರಿಂದ ಹತ್ತಿ ಕಂಕಣ ಹಾಗೂ ಉಣ್ಣೆ ಕಂಕಣ ಎಂಬ ಸಂಪ್ರದಾಯಗಳು ಬೆಳೆದು ಬಂದುದು, ಅನಂತರ ಕಲ್ಯಾಣ ಶರಣರ ಸಂಪರ್ಕವು ಕುರುಬ ಜನಾಂಗಕ್ಕೆ ಬಂದುದು, ಕೆಲವು ಕಾಲ ಅವರಿಗೆ ಬಹಿಷ್ಕಾರ ಬಿದ್ದುದು, ಆ ಮೇಲೆ ಅವರು ತಮ್ಮ ಸಂಪ್ರದಾಯಕ್ಕೆ ಶಾಂತಮುತ್ತಯ್ಯನೆಂಬ ಗುರುವನ್ನು ಪಡೆದು ಶಿವಭಕ್ತರಾದುದು[3] ಈ ಮೇಲೆ ತಿಳಿಸಿದ ಕುರುಬರ ಬೀರಪ್ಪ ಶಾಂತಮುತ್ತಯ್ಯನನ್ನು ಶಿವಶರಣರಾಗಿ ಕಂಡದನ್ನು ನೋಡಿದರೆ ಬಸವಣ್ಣನವರ ಜಾತ್ಯಾತೀತ ಮನೋಭಾವ ನಮಗೆ ಕಾಣಲು ಸಿಗುತ್ತದೆ. ಹೀಗಾಗಿ ಕುರುಬ ಜನಾಂಗದವರು ಡೊಳ್ಳಿನ ಹಾಡುಗಳಲ್ಲಿ ತಾವು ಕಂಡು ಕೇಳಿದ ಬಸವಣ್ಣನವರ ವ್ಯಕ್ತಿತ್ವವನ್ನು ಭಿನ್ನ ನೆಲೆಯಲ್ಲಿ ಚಿತ್ರಿಸಿದ್ದಾರೆ.

**ಡೊಳ್ಳಿನ ರಚನೆ**

ಈ ವಾದ್ಯದ ರಚನೆ ಸರಳ ವಿಧಾನದಿಂದ ಕೂಡಿದುದು: ಒಳಗೆ ಪೊಳಾಗಿ ಕೊರೆದ ಸಿಲಿಂಡರಾಕಾರದ ಸುಮಾರು ಅರ್ಧಂಗುಲ ದಪ್ಪಗಿನ ಅಂಚುಳ್ಳ ಕಟ್ಟಿಗೆಯ ಪಡಗದ ಎರಡೂ ಮಗ್ಗಲಿಗೆ ಚರ್ಮದ ಹೊದಿಕೆ ಹಾಕಿ ತಯಾರಿಸಲಾಗಿರುತ್ತದೆ. ಪಡಗದ ಕಟ್ಟಿಗೆ ಮಾವು ಅಥವಾ ಬೇವಿನ ಮರದ್ದು ಇರಬಹುದು, ಇಬ್ಬದಿಗೆ ಚರ್ಮದ ಹೊದಿಕೆಗಳಲ್ಲಿ ಒಂದು ಬದಿಯದು ಹೋತಿನ ಚರ್ಮದ್ದಾದರೆ ಇನ್ನೊಂದಯ ಬದಿಯದು ಆಡಿನ ಚರ್ಮದ್ದು. ಹೊದಿಕೆಯ ಹೊರಭಾಗದ ತುಂಬೆಲ್ಲ ಬಾಳೆಯ ಸೊಪ್ಪಿನ ಬೂದಿ ಹಾಗೂ ಎಣ್ಣೆಯಲ್ಲಿ ತಯಾರಿಸಿದ ಜಿಗಿಯನ್ನು ತೆಳ್ಳಗೆ ಲೇಪಿಸುತ್ತಾರೆ. ಇದರಿಂದಾಗಿ ಆ ಭಾಗ ದಪ್ಪಗಿನ ಮಂದ್ರನಾದ ಕೊಡುತ್ತದೆ. ಆಡಿನ ಚರ್ಮದ ಭಾಗ ಸಾಮಾನ್ಯವಾಗಿ ಬೆಳ್ಳಗಿರುತ್ತಿದ್ದು. ತೆಳುವಾದ ತಾರಕನಾದ ಕೊಡುವುದು. ಮಂದ್ರ ನಾದದ ಭಾಗವನ್ನು ಕಟ್ಟಿಗೆಯ ಗುಣಿಯಿಂದ ನುಡಿಸಲಾಗುತ್ತದೆ. ಚರ್ಮದ ಹೊದಿಕೆಗಳನ್ನು ಪಗಡಕ್ಕೆ ಹೊದಿಸಿ ಗಟ್ಟಿಯಾಗಿ ಹಿಡಿದಿಟ್ಟಿರಲು ಅವುಗಳ ಮೇಲೆ ಪಡಗದ

ಅಂಚಿನ ಸುತ್ತಲೂ ಪ್ರತಿಯೊಂದು ಹೊದಿಕೆಗೂ ಒಂದೊಂದು ಉಲಪಿ ಕಟ್ಟಿಗೆಯ (ನಾಗರ ಬೆತ್ತದಂತೆ ಮಣಿಸಲು ಬರುವಂತದ್ದು) ಕಂಕಣ ಹಾಕಿರಲಾಗುತ್ತದೆ. ಎರಡೂ ಕಂಕಣಗಳನ್ನು ನಾರಿನ/ನೂಲಿನ ಹಗ್ಗದಿಂದ ಜಗ್ಗಿ ಕಟ್ಟಿ ಬಿಗಿಗೊಳಿಸಲಾಗಿರುತ್ತದೆ. ಡೊಳ್ಳಗಳ ಪಡಗಗಳು ಉದ್ದದಲ್ಲಿ ಒಂದುವರೆ ಅಡಿಯಿಂದ ಎರಡಡಿಯವರೆಗೆ ಮತ್ತು ವ್ಯಾಸದಲ್ಲಿ ಹದಿನೆಂಟು ಅಂಗುಲದಿಂದ ಇಪ್ಪತ್ತುನಾಲ್ಕು ಅಂಗುಲದವರೆಗೆ ವಿವಿಧ ಪ್ರಮಾಣದ ನಾದ ಹೊರಡುವಂತ ಗಾತ್ರವಿರುತ್ತದೆ. ಒಂದು ಜೋಡು ಕಂಚಿನ ತಾಳ, ಒಂದು ಹಿತ್ತಾಳೆಯ ಜಾಂಗಟಿ ಇವು ಜತೆ ವಾದ್ಯಗಳು. ಒಮ್ಮೊಮ್ಮೆ ತಾಳಕ್ಕೆ ಹೊಂದುವಂತೆ ಏಕತಾನ ನುಡಿಸುವ, ಕೊಳಲನ್ನು ಬಳಸಲಾಗುತ್ತದೆ. ಡೊಳ್ಳಿನ ಮೇಳದಲ್ಲಿ ಇಂತಿಷ್ಟೇ ಜನರಿರಬೇಕೆಂಬ ನಿಯಮವಿಲ್ಲ.4

**ಡೊಳ್ಳು ಹುಟ್ಟಿದ ಕಥೆ**

ಡೊಳ್ಳಿನ ಕಥೆಯನ್ನು ಡೊಳ್ಳೇಶ್ವರನೆಂಬ ರಾಕ್ಷಸನಿಗೆ ಇದರ ಮೂಲವನ್ನು ಆರೋಪಿಸಲಾಗುತ್ತದೆ. ಡೊಳ್ಳೆಶ್ವರ ಈಶ್ವರನನ್ನು ಕುರಿತು ತಪಸ್ಸು ಮಾಡಿ ತನ್ನ ಹೊಟ್ಟೆಯಲ್ಲೇ ಶಿವ ನೆಲಸುವಂತೆ ವರವನ್ನು ಬೇಡಿದ. ಶಿವಭಕ್ತನ ಮನವಿಯನ್ನು ಮನ್ನಿಸಿ ಅಲ್ಲಿಯೇ ನೆಲಸಿದ. ಕೊನೆಗೆ ಶಿವನಿಲ್ಲದೆ ಲೋಕವೆಲ್ಲಾ ತಲ್ಲಣಗೊಂಡು ದೇವತೆಗಳು ಗಣಪತಿಯನ್ನು ಮೊರೆ ಹೊಕ್ಕರು ಅವನು ಡೊಳ್ಳೇಶ್ವರನ ಎದುರಿಗೆ ಅಪೂರ್ವ ರೀತಿಯಲ್ಲಿ ಕುಣಿಯ ತೊಡಗಿದ. ವಾದ್ಯಗಳ ಹೊಡೆತ ಗಣೇಶನ ಕುಣಿತಗಳು ಡೊಳ್ಳೇಶ್ವರನ ಹೊಟ್ಟೆಯಲ್ಲಿದ್ದ ಶಿವ ಉಬ್ಬಿ ಹೋಗುವಂತೆ ಮಾಡಿದವು. ಉಬ್ಬುತ್ತಾ ಶಿವ ದೊಡ್ಡದಾಗಿ ಬೆಳೆದ, ಡೊಳ್ಳೇಶ್ವರನ ಹೊಟ್ಟೆ ಸೀಳಿ ಹೋಯಿತು. ಕೊನೆಗೆ ದೇವತೆಗಳು, ಮರಳಿ ಶಿವನನ್ನು ಪಡೆದ ಸಂಕೇತವಾಗಿ, ಡೊಳ್ಳೇಶ್ವರನ ಹೊಟ್ಟೆಯ ಚರ್ಮದಿಂದಲೇ ಡೊಳ್ಳನ್ನು ಮಾಡಿಕೊಂಡು ಕುಣಿದರು. ಶಿವನನ್ನು ಸಂತುಷ್ಟಿಗೊಳ್ಳಿಸಿದರು. ಹೀಗೆ ಬಂದ ಈ ವಾದ್ಯ ಬೀರನ ಭಕ್ತರಾದ ಕುರುಬರಿಗೂ ಉಳಿದು ಬಂದಿತು.5

**ಡೊಳ್ಳಿನ ಹಾಡುಗಳಲ್ಲಿ ಬಸವಣ್ಣ**

ಡಾ. ಶಿವಾನಂದ ಗುಬ್ಬಣ್ಣನವರು ಸಂಪಾದಿತ "ಬಸವ ನಿನ್ನ ಹೆಸರು ದೆಸೆ ದೆಸೆಗೆ ಶಿವಮಂತ್ರ ಎಂಬ ಕೃತಿಯಲ್ಲಿ 8 ಹಾಡುಗಳನ್ನು ಕಾಣಬಹುದು. ಅವುಗಳು ಕ್ರಮವಾಗಿ ಕಲ್ಯಾಣಪುರದೊಳು ನಿತ್ಯಕ ಜಂಗಮರಿಗೆ, ಕಲ್ಯಾಣ ಪಟ್ಟಣದಾಗ ಕೋಟಿ ಜಂಗಮರ ತಂದು, ಬಿಜ್ಜಳರಾಜನ ಓಲಗದಲ್ಲಿ, ನಿರಂಕಾರ ಅಡ್ಡಗಲ ಗುರಳಿ ಹುಟ್ಟಿತೊ, ಧರೆಯ ಮೇಲೆ ನಿಂತು ಕರವ ಮುಗಿದುನಾ, ಮಾದಲಾಂಬಿ ಮಡದಿನೋಡು, ಧರಣಿಮ್ಯಾಲ ನೋಡಪ್ಪ ಯಾರ‍್ಯಾರು ದೊಡ್ಡವರು, ಹಂತವನೊ ನನ್ನ ಬಸವಣ್ಣ, ಈ 8 ಹಾಡುಗಳನ್ನು ಜೀವನ ಜೋಕಾಲಿ ಡೊಳ್ಳಿನ ಹಾಡುಗಳಲ್ಲಿ ಕಾಣಬಹುದು. ಅದನ್ನು ಡಾ.ಎಮ್.ಎಸ್.ಸುಂಕಾಪುರ ಸಂಪಾದಿಸಿದ್ದಾರೆ.

**ಕಲ್ಯಾಣಪುರದೊಳು ನಿತ್ಯಕ ಜಂಗಮರಿಗೆ**

ಕಲ್ಯಾಣ ಪಟ್ಟಣದಲ್ಲಿ ನಿತ್ಯ ಜಂಗಮರಿಗೆ ಅನ್ನಪ್ರಸ್ತ ನಡೆಯುತಿತ್ತು. ಆದರೆ ಕಲ್ಯಾಣದಲ್ಲಿ ಇರುವ ಶರಣರು, ಲಕ್ಷದ ಮೇಲೆ ತೊಂಬತ್ತು ಸಾವಿರ, ಇನ್ನಾರು ಸಾವಿರ ಜಂಗಮರಿಗಾಗಿ ಬಸವಣ್ಣ, ಕಾಮಿಕ ವನದ ಮಾದೇವರಾಜನ ಅರಮನೆಗೆ ಇಂಗು ಜೀರಿಗಿ ಮಾರುವ ಕೋರಿ ಶೆಟ್ಟಿಯಾಗಿ ಮಾರುವೇಷದಲ್ಲಿ ಹೋಗಿ ಜಂಗಮರನ್ನು ಚೀಲದಲ್ಲಿ ಕದ್ದು ಕಲ್ಯಾಣಕ್ಕೆ ತಂದು, ಅವರನ್ನು ಸಲುಹಿದ ಕಥೆಯಿದೆ. ಮುಂದೆ ಮಾದೇವ ಬಸವಣ್ಣನನ್ನು ಕೊಲ್ಲಲು ಹೇಳಿದ. ಆದರೆ ಬೇಡರು ಬಸವಣ್ಣನಿಗೆ ಶರಣಾಗಿ ಮೋಕ್ಷವನ್ನು ಹೊಂದುವುದು.

ಇದನ್ನು ತಿಳಿದ ಮಾದೇವರಾಜನು ತನ್ನ ಮಡದಿಯೊಂದಿಗೆ ಕಲ್ಯಾಣಕ್ಕೆ ಬಂದು ಮೋಳಗಿ ಮಾರಯ್ಯನಾಗಿ, ಕಟ್ಟಿಗೆ ಹೊರಿಯನ್ನು ಮಾರುವ ಕಾಯಕ ಮಾಡುತ್ತ ದುಡಿದದರಲ್ಲಿ ಒಬ್ಬ ಜಂಗಮನಿಗೆ ಅನ್ನ ನೀಡಿ ಜೀವನ ಸಾಗಿಸುತ್ತಿರುತ್ತಾನೆ. ಆದರೆ ಅವನ ಕಷ್ಟವನ್ನು ನೋಡಲಾಗದೆ ಬಸವನ್ನನವರು ಅವನ ಮನೆಗೆ ಹೋಗಿ ಹೊಸ್ತಿಲ ಮೇಲೆ ಹೊನ್ನ ಇಡುವುದು ಅವನು ಅದನ್ನು ತಿಪ್ಪೆಗೆ ಎಸೆದು ಬಸವಣ್ಣನನ ಮನೆಯ ಎಲ್ಲ ಜಂಗಮರಿಗೆ ಮೊಳಿಗೆ ಮಾರಯ್ಯ ಅನ್ನಪ್ರಸಾದ ನೀಡಿ ತನ್ನ ಪ್ರಸಾದ ಮಹಿಮೆಯನ್ನು ಸಾರುವದರ ಮೂಲಕ ಹಾಡು ಮುಕ್ತಾಯವಾಗುತ್ತದೆ.

ಬಸವಣ್ಣನವರ ದಾಸೋಹದ ಮಹಿಮೆಯನ್ನು ಡೊಳ್ಳಿನ ಹಾಡುಗಾರರು ಹೀಗೆ ಬಣ್ಣಿಸಿದ್ದಾರೆ.

**ಗಿಂಡಿಯಷ್ಟು ಅನ್ನ ದಂಡಿಗೆ ಉಣಸಿದರೆ**

**ಇದಷ್ಟು ಇತ್ತ ಹಿಡಿಬುತ್ತಿಯನು**

**ಉಣಸಿದ ಜನಕೆಲ್ಲ ಅಂತಾನೊ ಬಸವಣ್ಣ**

**ಇದರ ಮರ್ಮ ಕೇಳಬೇಡಿರಿ ಅನ್ನವನು**[6]

ಬಸವಣ್ಣನವರ ಈ ಚೋರಬಸವಣ್ಣನ ಕಥೆ ಡಾ.ಪಿ.ಕೆ.ರಾಜಶೇಖರ ಸಂಪಾದಿತ ಊಳ್ವೆಯ ಶರಣರು ಕಥೆಯಲ್ಲಿ ಬಸವಣ್ಣನವರ ಭಕ್ತಿ ಮತ್ತು ನೀಲಮ್ಮನವರ ಜಂಗಮ ಸೇವೆಯಿಂದ ಸುಪ್ರೀತನಾದ ಸಂಗಮೇಶ್ವರ ಅಶರೀರವಾಣಿಯಲ್ಲಿ ಅವರಿಬ್ಬರ ಅಭೀಷ್ಟವೇನೆಂದು ಕೇಳುತ್ತಾನೆ. ಬಸವಣ್ಣನವರು ಆರು ಸಾವಿರ ಜಂಗಮರನ್ನು ಭೋಜನಕ್ಕೆ ಕಳುಹಿಸಬೇಕೆಂದು ಬೇಡುತ್ತಾರೆ. ಉತ್ತರದೇಶದ ಮಾಂಡವೀಪುರದ ಊಳ್ವೆ ಮನೆತನದ ಮಾದೂರಾಯ (ಮಹಾದೇವರಾಜ) ನೆಂಬಾತ ಸದಾಕಾಲ ಮಾಡಿಸುವ ಶಿವಪೂಜೆ ಮತ್ತು ಜಂಗಮ ಸೇವೆಯನ್ನು ತಿಳಿದ ಬಸವಣ್ಣನವರಿಗೆ ಅಲ್ಲಿರುವ ಆರು ಸಾವಿರ ಜಂಗಮರನ್ನು ಕರೆ ತರುವ ನಿರ್ದೇಶನ ದೊರೆಯುತ್ತದೆ. ಮುಂದೆ ಬಸವಣ್ಣ ಮಹಾದೇವ ಭೂಪಾಲನ ರಾಜ್ಯಕ್ಕೆ ಹೋಗಿ ಮಾರುವೇಷದ ಬಸಶೆಟ್ಟಿ ವ್ಯಾಪಾರಿಯ ವೇಷದಲ್ಲಿ ಜಂಗಮರನ್ನು ಬಿಲ್ವಪತ್ರೆಗಳನ್ನಾಗಿ ಮಾಡಿ ಜೋಳಿಗೆಯಲ್ಲಿಟ್ಟುಕೊಂಡು ಕಲ್ಯಾಣ ಪಟ್ಟಣಕ್ಕೆ ತರುತ್ತಾರೆ.[7]

**ಹಸುಬೆ ಚೀಲದೊಳಗೆ ಇಳಿದಾರು ಸರಣಾರು**

**ಬಿಲ್ಪತ್ರೆ ದಳುವಾಗಿ ಕುಂತವ್ರೆ**

**ಆರುಸಾವ್ರಗಣಗಳ ಬಿಲ್ಪತ್ರೆದಳಮಾಡಿ**

**ಮಾಂಡವಿ ಪುರವ ಬಿಡುತಾರೆ.**

**ಕಲ್ಯಾಣ ಪಟ್ಟಣದಾಗಾ ಕೋಟಿ ಜಂಗಮ್ರು**

ಕಲ್ಯಾಣ ಪಟ್ಟಣದ ಬಸವಣ್ಣನವರ ಭಕ್ತಿಯನ್ನು ಪರೀಕ್ಷೆ ಮಾಡುವುದಕ್ಕೆ ಸಾಕ್ಷಾತ ಈಶ್ವರನು ಕಪಟ ರೂಪ ತಾಳಿ ಹೆಂಡ ಕಂಡ ನೊಯ್ದು ಬಂಗಿಚೀಲನಾಕಿ ಈಶ್ವರನು ಬರುತ್ತಾನೆ. ಆದರೆ ಬಸವಣ್ಣನವರ ದ್ವಾರಪಾಲಕರು ಕೊರಳಲ್ಲಿ ಲಿಂಗವಿಲ್ಲದಕ್ಕೆ ಈಶ್ವರನಿಗೆ ಊಟಕೊಂಡದೇ ನಿರಾಕರಿಸುತ್ತಾರೆ. ಈಶ್ವರ ಕೇತನಕೇರಿಗೆ ಹೋಗಿ ಸತ್ತ ಕರವ ಬಿಚ್ಚಿ ಹಾಲ ಹಾಕಿದ್ದ ಈಶ್ವರನನ್ನು ಕಂಡು ಬಸವಣ್ಣ ತನ್ನ ಮನೆಗೆ

ಕರೆಯುವುದು, ಈಶ್ವರ ಬಾರದೆ ಹೋದಾಗ ಪಾದ ಹಿಡಿದು ಎಳೆಯುವುದು ಪಾದಕಿತ್ತು ಬರುವದನ್ನು ನೋಡಬಹುದು.

**ಕಿತ್ತ ಪಾದ ನೋಡೋ ಹೊತ್ತಾನು ಬೆನ್ನಿಲೆ**
**ಅರಮನಿಗ್ಹೋದ ಬಸವೇಶ್ವರನು**
**ಅರಮನಿಒಳಗೊಂದು ಗುರುವಿನ ಗದ್ದಿಗಿ**
**ಓದು ಇಳವಿದ ಬಸವಣ್ಣನು**8

ಮುಂದೆ ಈಶ್ವರ ಹತ್ತು ಅವತಾರ ತಾಳುವುದು ಬಸವಣ್ಣನವರಿಗೆ ಬೇಡಿ ವರವ ಕೇಳು ಎನ್ನುವದರ ಮೂಲಕ ಹಾಡು ಮಕ್ತಾಯವಾಗುತ್ತದೆ. ಆದರೆ ಮಂಟೇಸ್ವಾಮಿ ಕಾವ್ಯದಲ್ಲಿ ಕಥೆ ಹೀಗಿದೆ. ಕಲ್ಯಾಣದಲ್ಲಿ ದಾಸೋಹಕ್ಕೆ ಮೊದಲು ಶುಭ್ರವಾಗಿರುವ ಮಹಾತ್ಮರು, ಶರಣರನು ಬಿಡು ಅನಂತರ ರೋಗಿ ಭಿಕ್ಷುಕರನ್ನು ಬಿಡಬೇಕೆಂದು ಬಸವಣ್ಣನ ಆಜ್ಞೆಯಾಗಿರುತ್ತದೆ. ಇದನ್ನು ಮನಗಂಡ ಮಂಟೇಸ್ವಾಮಿ ಕುಷ್ಠರೋಗಿಯ ವೇಷಧಾರಿಯಾಗಿ ಕಲ್ಯಾಣ ಪಟ್ಟಣದ ಬಾಗಿಲಿಗೆ ಬರುತ್ತಾನೆ. ಬಾಗಿಲಲ್ಲಿದ್ದ ಕಟುಗರ ಸಂಗಯ್ಯ ಎನ್ನುವ ವ್ಯಕ್ತಿ ಮಂಟೇಸ್ವಾಮಿಯನ್ನು ತಡೆದು ನಿಲ್ಲಿಸುತ್ತಾರೆ. ಇದರಿಂದ ಕೋಪಗೊಂಡ ಮಂಟೇಸ್ವಾಮಿ ಬಸವಣ್ಣ ಮತ್ತು ನೀಲಾಂಬಿಕೆಯರಿಗೆ ಜ್ಞಾನೋದಯ ಮಾಡಿಸಿ, ಬಾಗಿಲಿಗೆ ನಮಗಿಂತ ಬಹುದೊಡ್ಡ ಶರಣ ಬಂದಿದ್ದಾನೆಂದು ತಿಳಿಯುವಂತೆ ಮಾಡುತ್ತಾನೆ.

ಈ ವಿಷಯ ತಿಳಿದ ಬಸವಣ್ಣ–ನೀಲಾಂಬಿಕೆ ಅವರು ಬಾಗಿಲಿಗೆ ಧಾವಿಸುತ್ತಾರೆ. ಅಷ್ಟೊತ್ತಿಗಾಗಲೇ ಮಂಟೇಸ್ವಾಮಿ ಹರಳಯ್ಯನ ತಿಪ್ಪೆಗುಂಡಿಯಲ್ಲಿ ಬಿದ್ದಿರುತ್ತಾನೆ. ಅದನ್ನು ಕಂಡ ಬಸವ ದಂಪತಿಗಳು ಸ್ವಾಮಿಯನ್ನು ಕೈ ಹಿಡಿದೆತ್ತಲು ಕೈ, ಕಾಲಿಡಿದೆತ್ತಲು ಕಾಲು, ರುಂಡವಿಡಿದೆತ್ತಲು ರುಂಡ ಕಿತ್ತು ಬರುತ್ತದೆ. ಅವುಗಳನ್ನೆಲ್ಲಾ ಪೊಟ್ಟಣ ರೀತಿ ಕಟ್ಟಿ ಹೊತ್ತು ತರುತ್ತಾನೆ. ಸ್ವಾಮಿಯ ಪವಾಡ ಪರಿಣಾಮದಿಂದ ಅವರು ಹೊತ್ತು ತರುವ ಆ ದೇಹದ ಭಾಗಗಳು ನೋಡುವ ಶರಣರಿಗೆ ಹೆಂಡದಗಡಿಗೆ, ಮಾಂಸದ ಪೊಟ್ಟಣದ ರೀತಿ ಕಾಣಲಾರಂಭಿಸುತ್ತಾವೆ. ಇಂತಹ ದೃಶ್ಯವನ್ನು ನೋಡಿದ ಕಲ್ಯಾಣದ ಮೇಲ್ವರ್ಗದ ಶರಣರು ನಾವು ಮತ್ತು ನಮ್ಮ ಲಿಂಗ ಬತ್ತಗೆಟ್ಟಂತಾಯಿತು ಎಂದು ಕಲ್ಯಾಣದಿಂದ ಓಡುತ್ತಾರೆ. ದಲಿತ ಶರಣರು ಮಾತ್ರ ಅಲ್ಲೇ ಇದ್ದರು. ಆಗ ಸ್ವಾಮಿ ಬಸವಣ್ಣನಿಗೆ ಬುದ್ದಿವಾದ ಹೇಳುತ್ತಾರೆ. ನಿಜವಾದ ಶರಣರೆಂದರೆ ಇವರು (ದಲಿತರು) ಓಡಿ ಹೋದವರೆಲ್ಲ ಕಳ್ಳ ಜಂಗಮರು ಎನ್ನುತ್ತಾರೆ.9

**ಬಿಜ್ಜಳರಾಜನ ಓಲಗದಲ್ಲಿ/ಧರೆಯ ಮೇಲೆ ನಿಂತು ಕರವ ಮುಗಿದು ನಾ/ಮಾದಲಾಂಬಿ ಮಡದಿ ನೋಡು**

ಬಿಜ್ಜಳ ರಾಜನ ಓಲಗದ ಡೊಳ್ಳಿನ ಹಾಡಿನಲ್ಲಿ ಭಕ್ತರಾದ ಗೊಲ್ಲತಿ ಕೊಡ ಹೊತ್ತು ಸಾಗುವಾಗ ಕೊಡು ಬೀಳುವುದನು ಬಿಜ್ಜಳನ ಓಲಗದಲ್ಲಿ ಕುಳಿತು ಬಸವ ತಡೆಯುವುದು ಇದರ ಪರೀಕ್ಷೆ ಬಿಜ್ಜಳರಾಯ ಮಾಡುವುದು. ಪೆನ್ನಂಬಯನೆಂಬ ಶಿವಶರಣ ಶಿವಾರ್ಚನೆಗೆ ಹೂವು ತರಲು ಹೋಗಿ ಕೈ ಜಾರಿ ಬಿದ್ದಾಗ ಈಶ್ವರ ಬಂದು ಎತ್ತವುದು. ಈ ಡೊಳ್ಳಿನ ಹಾಡಿನ ಹಾಡಿನಲ್ಲಿ ಕಂಡುಬರುತ್ತದೆ. ಧರೆಯ ಮೇಲೆ ನಿಂತು ಕರವ ಮುಗಿದು ನಾ ಎಂಬ ಹಾಡಿನಲ್ಲಿ ಬಸವಣ್ಣ ಜನನದ ಜೊತೆಗೆ ಸತ್ತ ಬೆನಕನೆಂಬ ಹುಡುಗನನ್ನು ಬಸವಣ್ಣನವರು ಬದುಕಿಸಿದ ಕಥೆಯಿದೆ. ಮಾದಲಾಂಬಿ ಮಡದಿ ನೋಡು ಈ ಹಾಡಿನಲ್ಲಿ ಬಸವಣ್ಣ ಸತ್ತ

ಆಕಳ ಹಾಲು ಕರೆದದ್ದು. ರುದ್ರಭೂಮಿಗೆ ಹೋಗಿ ಸತ್ತ ಮನುಷ್ಯರನು ಎಬ್ಬಿಸಿದ್ದು, ಆಯಿ ಮುತ್ಯಾ ಸತ್ತವರನ್ನು ಕರೆದು ತಂದಿದ್ದು, ಸತ್ತ ಮನುಷ್ಯರನ್ನು ಕಾಗಿ ಮಾಡಿ ಹಾರಿಸಿ ಬಿಟ್ಟ ಘಟನೆಗಳು ಮೂಡಿ ಬಂದಿವೆ.

ಧಾರ್ಮಿಕ ತತ್ವಗಳು ಸಾಮಾನ್ಯರಿಗೆ ಅರ್ಥವಾಗವು. ತಾರ್ಕಿಕ ಜಟಿಲತೆಯಿಂದ ಕೂಡಿದ ಆ ತತ್ವಗಳನ್ನು ನೇರವಾಗಿ ಹೇಳಿದರೆ ಅವು ಅವರಿಗೆ ಮುಗಿ ಮಲ್ಲಿಗೆಯಾಗುವವು. ಪಂಡಿತರಿಗೆ, ಸುಶಿಕ್ಷಿತರಿಗೆ ಮಾತ್ರ ಅವು ಅಂಗೈ ಹುಣ್ಣಿನಂತೆ ದೃಷ್ಟಿ ಮುಷ್ಟಿ ಗ್ರಾಹ್ಯವೆನ್ನುವಷ್ಟು ಸುಲಭವಾಗಿ ಅರ್ಥವಾಗುತ್ತದೆ. ಸಾಮಾನ್ಯ ಜನರಿಗಾದರೋ ಆ ಶಕ್ತಿ ಇರುವುದಿಲ್ಲ. ಆದುದರಿಂದ ಪುರಾಣಕಾರರು ಅವರಿಗೆ ಧಾರ್ಮಿಕ ತತ್ವಗಳು ಸುಲಭವಾಗಿ ಪರಿಣಾಮಕಾರಿಯಗಿ ತಿಳಿಯಲೆಂದು ಅಮೂರ್ತ ತತ್ವಗಳ ಸ್ಥಾನದಲ್ಲಿ ವಸ್ತು ವ್ಯಕ್ತಿ ಹಾಗೂ ಘಟನೆಗಳನ್ನು ಬಳಸಿ ಸಾಂಕೇತಿಕತೆಯನ್ನುಳ್ಳ ಪವಾಡ ಕಥೆಗಳನು ಕಟ್ಟಿದ್ದುಂಟು.[10] ಈ ಪಾವಾಡ ಕಥೆಗಳನ್ನು ಜನಪದರು ಕೇಳಿ ತಮ್ಮ ಹಾಡಿನಲ್ಲಿ ಅಳವಡಿಸಿಕೊಂಡಿದುಂಟು. ಮಡಿದವರನ್ನು ಬದುಕಿಸುವುದು ಅಸಾಧ್ಯ. ಜನಪದರ ಹಾಡಿನಲ್ಲಿಯ ಈ ಹೇಳಿಕೆಗಳನ್ನು ನಾವಿಲ್ಲಿ, ಶಬ್ದಶ: ಸ್ವೀಕರಿಸದೆ. ಇದರ ಹಿಂದಿರುವ ಗೂಡಾರ್ಥವನ್ನು ಅರಿಯಲು ಪ್ರಯತ್ನಿಸಬೇಕು. ಮಡಿದವರೆಂದರೆ ಮಡಿದಂತೆ ಇದ್ದ ಸಾಮಾನ್ಯಜನರಲ್ಲಿ ಆತ್ಮವಿಶ್ವಾಸ ಮತ್ತು ಜೀವಶಕ್ತಿಯನ್ನು ಆತ್ಮಸ್ಥೆರ್ಯ ಧೈರ್ಯಗಳನ್ನು ತುಂಬಿದನು ಎಂದರ್ಥ. ಅಂದಿನ ಸಮಾಜದಲ್ಲಿದ್ದ ವೈದಿಕ ಕರ್ಮಠರ ಪಟ್ಟಭದ್ರರ ಹಿತಾಸಕ್ತಿಗೆ, ಶೋಷಣೆಗೆ ಒಳಗಾಗಿ ನಿರ್ಜೀವ ನರಪೇತಲಗಳಂತೆ ಬದುಕುತ್ತಿರುವವರನ್ನು ಕಂಡು ಬಸವಣ್ಣನ ಮನ ಅನುಕಂಪತೆಯಿಂದ ಮಿಡಿಯಿತು. ಅವರ ಸಹಾಯಕ್ಕೆ ಧಾವಿಸಿ ಅವರನ್ನು ಆರ್ಥಿಕವಾಗಿ ಸಾಮಾಜೀಕವಾಗಿ ಸಬಲರಾಗಿಸಿ ಉದ್ಧಾರ ಮಾಡಿದನು. ಅವರ ಬದುಕಿನಲ್ಲಿ ಭರವಸೆ ತುಂಬಿ ಮುನ್ನಡೆಸಿದನು. ಹೀಗೆ ಮಾಡಿದಾಗ ಅವರನ್ನು ಬಸವಣ್ಣನು ಬದುಕಿಸಿದಂತೆಯೇ ಅಲ್ಲವೇ? ಸತ್ತವರನ್ನು ಬದುಕಿಸಿದನೆಂಬುದನ್ನು ಈ ಹಿನ್ನಲೆಯಲ್ಲಿ ನೋಡಬಹುದು.

**ನಿರಂಕಾರ ಅಡ್ಡ ಅಗಲ ಗುರಳಿ ಹುಟ್ಟಿತೊ/ದರಣಿಮ್ಯಾಲ ನೋಡಪ್ಪ ಯಾರ‍್ಯಾರು ದೊಡ್ಡವರು/ಹೆಂತವನನ್ನ ಬಸವಣ್ಣ.**

ನಿರಂಕಾರ ಅಡ್ಡ ಅಗಲ ಗುರಳಿ ಹುಟ್ಟಿತೊ, ಈ ಹಾಡಿನಲ್ಲಿ ಹಾಡುಗಾರ ಮದುವೆಯ ಶಾಸ್ತ್ರವನು ಅರಿವಿಗೆ ಹೊಲಿಸಿ ಬಸವಣ್ಣನಿಂದ ಅರಿವುಂಟಾದ ಬಗೆಯನ್ನು ಹಾಡುಗಾರ ವರ್ಣಿಸಿದ್ದಾರೆ.[11] ದೇವಿ ದ್ಯಾವರ ಲಗ್ನ ಹಿಡಿದಾನ ಭಕ್ತಿವಂತ ನನ್ನ ಬಸವಯ್ಯನೊ ಎಂಬುವುದರ ಮೂಲಕ ಪ್ರಾರಂಭವಾಗುವ ಹಾಡು ಮದುವೆ ಶಾಸ್ತ್ರಗಳಾದ ಹಾಲಗಂಬ ಕಟ್ಟುವುದು, ಐರಾಣಿ ಮಗಿ ಮಾಡುವುದು, ಸುರಗಿ ಸುತ್ತುವುದು. ಬಾಸಿಂಗ ಕಟ್ಟುವುದು, ಮಂತ್ರ ಹೇಳುವುದು, ಕಂಕಣ ಕಟ್ಟುವುದು, ಅಕ್ಕಿಕಾಳ ಹಾಕುವುದು ಮೆರವಣಿಗೆ ಮಾಡಿಸುವುದು ಹಗಲದೀಪ ಹಚ್ಚುವುದು ರೂಪಕಗಳಾಗಿ ಮೂಡಿಬಂದಿದೆ. ಈ ಹಾಡಿನಲ್ಲಿ:

**"ತನ್ನ ಶರೀರದಿಂದ ವಿಚಾರವೆನ್ನ**
**ಹಾಲಗಂಬ ಕಟ್ಟತಾನ ಬಸವಯ್ಯನೊ**
**ತನ್ನ ಶರೀರ ಮಣ್ಣನು ತಗದು**
**ಏನು ಹೇಳಲೆಪ್ಪ ನಾ ಬಸವಯ್ಯನೊ**[12]

ಧರಣಿಯ ಮ್ಯಾಲ ನೋಡಪ್ಪ ಯಾರ್ಯಾರು ದೊಡ್ಡವರು ಈ ಹಾಡಿನಲ್ಲಿ ಕೃಷ್ಣ, ದೊಡ್ಡವ ಗಣಪತಿ ದೊಡ್ಡವ ಹರಿಶ್ಚಂದ್ರ ದೊಡ್ಡವರು ತಿಪ್ಪೇಸೋರು ಹನುಮಂತ ದೊಡ್ಡವನು, ನಾಗಭೂಷಣ ದೊಡ್ಡವರು, ಕೊನೆಗೆ ಬಸವಣ್ಣನನ್ನು ದೊಡ್ಡವನ್ನು ಎಂದು ಹಾಡು ಮುಕ್ತಾಯವಾಗುತ್ತದೆ. ಹಂತವನೋ ನನ್ನ ಬಸವಣ್ಣನ ಹಾಡಿನಲ್ಲಿ ಬಸವಣ್ಣನವರು ತಾಳಿದ ಅವತಾರಗಳ ಬಗ್ಗೆ ವಿಶ್ಲೇಷಿಸಿದ್ದಾನೆ ಕವಿ. ಹೆಂತವನೊ ನನ್ನ ಬಸವಣ್ಣ ಮತ್ತೇನ ಅವತಾರ ತಳೀದ್ಯೊ ಹಂದರಕ ದುಂದಕರ ಅವತಾರ ತಾಳಿ ಆಲದ ಎಲಿ ಮ್ಯಾಗ ನಿಂತವನೊ.[13]

**ಉಪಸಂಹಾರ**

ಹೀಗೆ ಡೊಳ್ಳಿನ ಹಾಡುಗಳಲ್ಲಿ ಬಸವಣ್ಣನವರನ್ನು ಅವತಾರಿ ಬಸವಣ್ಣ, ದಾಸೋಹಿ ಬಸವಣ್ಣ ಪವಾಡ ಬಸವಣ್ಣ, ಕಾಯಕ ಪ್ರೇಮಿ ಬಸವಣ್ಣನವರನ್ನು ತಮ್ಮ ಡೊಳ್ಳಿನ ಹಾಡುಗಳಲ್ಲಿ ಜನಪದ ಹಾಡುಗಾರರು ವರ್ಣಿಸಿದ್ದಾರೆ. ಇಲ್ಲಿ ಬರುವ 8 ಹಾಡುಗಳು ವಿಭಿನ್ನ ನೆಲೆಯಲ್ಲಿ ಮೂಡಿರುವದನ್ನು ಕಾಣಬಹುದು. ಪರಿಶ್ರಮದ ಮೂಲಕ ದುಡಿದ ಹಣದಲ್ಲಿ ಒಂದು ಭಾಗ ದಾಸೋಹಕ್ಕೆ ಮೀಸಲಿಟ್ಟು, ಹಸಿದವರಿಗೆ ಅನ್ನ ಹಾಕುವ ಅನ್ನದ ಬಸವಣ್ಣನವರನ್ನು ಈ ಹಾಡಿನಲ್ಲಿ ಕಾಣಬಹುದು. ಭಕ್ತಿಯಿಂದ ನೆನೆವ ಭಕ್ತನ ಕೂಗಿಗೆ ಹಂಬಲಿಸುವ ಭಕ್ತ ಬಸವಣ್ಣನನ್ನು ಕೂಡಾ ಕಾಣಬಹುದು. ಮದುವೆ ಶಾಸ್ತ್ರದ ಮೂಲಕ ಬದುಕಿನ ಸತ್ವ ಸಾರುವ ತತ್ತ್ವಜ್ಞಾನಿ ಬಸವಣ್ಣನನ್ನು ನೋಡಬಹುದು. ಎನಗಿಂತ ಕಿರಿಯರಿಲ್ಲಾ, ಶಿವಭಕ್ತರಿಗಿಂತ ಹಿರಿಯರಿಲ್ಲಾ ಎಂದ ಬಸವಣ್ಣನವರೇ ದೊಡ್ಡವರು ಎಂದ ಭಕ್ತರ ಮೆಚ್ಚಿನ ಬಸವಣ್ಣನವರನ್ನು ಕಾಣಬಹುದು. ಶಿವನಿಂದ ಹುಟ್ಟಿದ ಡೊಳ್ಳಿನಲ್ಲಿ ಶಿವಸ್ವರೂಪಿಯಾದ ಬಸವಣ್ಣನವರ ವ್ಯಕ್ತಿತ್ವದ ಢಮರುಗ ಸದಾ ಗುನುಗುಟ್ಟುವದನ್ನು ಈ ಮೇಲಿನ ಡೊಳ್ಳಿನ ಹಾಡುಗಳಲ್ಲಿ ಕಾಣಬಹುದು.

**ಕೊನೆಯ ಟಿಪ್ಪಣೆಗಳು**


1. ಬಸವರಾಜ ಸಬರದ. (2020). ಶರಣರ ಸಾಮಾಜಿಕ ಸಿದ್ಧಾಂತಗಳು. ಬಸವಧರ್ಮ ಸಂಸ್ಥೆ, ಹೀರೇಮಠ ಸಂಸ್ಥಾನ, ಭಾಲ್ಕಿ. ಪು.1.
2. ರಾಜಶೇಖರ. ಪಿ.ಕೆ. (2010). ಜನಪದ ಶರಣ ಕಾವ್ಯಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ಪು.215.
3. ವೀರಣ್ಣ ದಂಡೆ ಡಾ. ಶ್ರೀಪಾದ ಶೆಟ್ಟಿ (ಸಂ.) (2006). ಸುರ್ವಣ ಜಾನಪದ ಲೇಖನಗಳು, ಲೇ. ಡಾ.ಬಿ.ಬಿ.ಹೆಂಡಿ ಲೇ. ಡೊಳ್ಳಿನ ಹಾಡು. ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು. ಪು.ಸಂ.217.
4. ಅದೇ. ಪು.ಸಂ.211.
5. ಕಾಳೇಗೌಡ ನಾಗವಾರ ಮತ್ತು ಅಂಬಳಿಕೆ ಹಿರಿಯಣ್ಣ. (ಸಂ.) (2000). ಜೀಶಂಪ ಜಾನಪದ ಬರಹಗಳು, ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು. ಪು.196.
6. ಶಿವಾನಂದ ಗುಬ್ಬಣ್ಣವರ ಸಂ. (1988). ಬಸವಣ್ಣ ನಿನ್ನ ಹೆಸರು ದೆಸೆದೆಸೆಗೆ ಶಿವಮಂತ್ರ (ಜನಪದ ಗೀತೆಗಳಲ್ಲಿ ಬಸವಣ್ಣ) ಶ್ರೀ ಸಿ.ಎ.ಜಮಖಾಡಿ ಮಠ, ಬಸವ ಸಮಿತಿ, ಬೆಂಗಳೂರು. ಪು.ಸಂ.30.

7. ರಾಜಶೇಖರ. ಪಿ.ಕೆ. (2010). ಜನಪದ ಶರಣ್ಣ ಕಾವ್ಯಗಳು (ಊಳ್ವೆಯ ಶರಣ್ಣರು). ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ಪು.ಸಂ.19.
8. ಡಾ.ಶಿವಾನಂದ ಗುಬ್ಬಣ್ಣನವರ. ಬಸವಣ್ಣ ನಿನ್ನ ಹೆಸರು ದೆಸೆದೆಸೆಗೆ ಶಿವಮಂತ್ರ. ಪು.ಸಂ.39.
9. ಮುತ್ತಯ್ಯ. ಎಸ್.ಎಂ. (2007). ಜಾನಪದ ಸಂಕಥನ, ಲೇ. ಶರಣ ಚಳವಳಿಯ ಕುರಿತು ಮೌಖಿಕ ಇತಿಹಾಸ, ಅಕ್ಷಯ ಪ್ರಕಾಶನ, ಚಿತ್ರದುರ್ಗ. ಪು.ಸಂ.30
10. ಪೂಜಾರ. ವ್ಹಿ.ಜಿ. (2011) ಸಂ. ಬಸವಣ್ಣ. ಲೇ. ಬಸವಣ್ಣನ ಪವಾಡಗಳ ಅಂತರಾರ್ಥ: ಒಂದು ವೈಚಾರಿಕ ನೋಟ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿ.ವಿ. ಪು.ಸಂ.179.
11. ಅದೇ. ಪು.ಸಂ.174.
12. ಡಾ.ಶಿವಾನಂದ ಗುಬ್ಬಣ್ಣನವರ. ಬಸವಣ್ಣ ನಿನ್ನ ಹೆಸರು ದೆಸೆದೆಸೆಗೆ ಶಿವಮಂತ್ರ. ಪು.ಸಂ.43
13. ಅದೇ. ಪು.ಸಂ.49

**ಪರಾಮರ್ಶನ ಗ್ರಂಥಗಳು**


- ಕಾಳೇಗೌಡ ನಾಗವಾರ ಮತ್ತು ಅಂಬಳಿಕೆ ಹಿರಿಯಣ್ಣ. (ಸಂ.) (2000). ಜೀಶಂಪ ಜಾನಪದ ಬರಹಗಳು, ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ಮುತ್ತಯ್ಯ. ಎಸ್.ಎಂ. (2007). ಜಾನಪದ ಸಂಕಥನ, ಲೇ. ಶರಣ ಚಳವಳಿಯ ಕುರಿತು ಮೌಖಿಕ ಇತಿಹಾಸ, ಅಕ್ಷಯ ಪ್ರಕಾಶನ, ಚಿತ್ರದುರ್ಗ.
- ರಾಜಶೇಖರ. ಪಿ.ಕೆ. (2010). ಜನಪದ ಶರಣ್ಣ ಕಾವ್ಯಗಳು (ಊಳ್ವೆಯ ಶರಣ್ಣರು). ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ವೀರಣ್ಣ ದಂಡೆ ಡಾ. ಶ್ರೀಪಾದ ಶೆಟ್ಟಿ (ಸಂ.) (2006). ಸುರ್ವಣ ಜಾನಪದ ಲೇಖನಗಳು, ಲೇ. ಡಾ.ಬಿ.ಬಿ.ಹೆಂಡಿ ಲೇ. ಡೊಳ್ಳಿನ ಹಾಡು. ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.